# ಕರ್ನಾಟಕದ ಶಾಸನಗಳ ಅಧ್ಯಯನ

Principal,
G. P. Porwal Arts, Comm &
V. V. Salimath Sc. College
SINDGI-586128. College Code: 52

# —: ಕರ್ನಾಟಕದ ಶಾಸನಗಳ ಅಧ್ಯಯನ :—

## ಪರಿವಿಡಿ


- ಮುನ್ನುಡಿ
- ಶಾಸನ ಪದದ ಅರ್ಥ
- ಶಾಸನ ಪದದ ಉತ್ಪತ್ತಿ
- ಶಾಸನ ಎಂದರೆ
- ಶಾಸನ ಅಧ್ಯಯನದ ಉಗಮ- ವಿಕಾಸ
- ಕನ್ನಡ ಭಾಷೆ ಮತ್ತು ಭಾಷಿಕ ರಚನೆಯು ಅವುಗಳ ಬಗ್ಗೆ
- ಕರ್ನಾಟಕದಲ್ಲಿ ದೊರೆತ ಕೆಲವು ಶಾಸನಗಳು ಮತ್ತು ಅವುಗಳ ಬಗ್ಗೆ

    i. ಹಲ್ಮಿಡಿ ಶಾಸನ
    ii. ಬದಾಮಿ ಶಾಸನ
    iii. ಶ್ರವಣಬೆಳಗೊಳ ಶಾಸನ
    iv. ಅಬ್ಬನವಾತ ಶಾಸನ
    v. ಕುಬೇರ ಲಕ್ಷ್ಮ ಶಾಸನ
    vi. ಚಂದ್ರವಳ್ಳಿ ಶಾಸನ
    vii. ಅಶೋಕನ ಬ್ರಹ್ಮಗಿರಿ ಶಾಸನ
    viii. ಲಕ್ಷ್ಮೇಶ್ವರ ಶಾಸನ
    ix. ಐಹೊಳೆ ಶಾಸನ
    x. ತಾಳಗುಂದ ಶಾಸನ
    xi. ಕೆಂಪೆಕ್ರೈಮೆಟ್ ಚನ್ನನ ಅಪ್ಪತಾಮ್ರದ ಶಾಸನ.
    xii. ಅತ್ತಿಮಬ್ಬೆಯ ಲಕ್ಕುಂಡಿ ಶಾಸನ.

# ಕನ್ನಡ ಶಾಸನಗಳ ಅಧ್ಯಯನ

ಶಾಸನಗಳು ಒಂದು ಪ್ರದೇಶದ ಜನರ ರಾಜಕೀಯ, ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಮನುಷ್ಯನಿಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ಒದಗಿಸುವ ಮಹತ್ವದ ಪುರಾವೆಗಳು ಎಂದೇ ಭಾವಿಸಲಾಗಿದೆ. ಇದ್ದರಿಂದಲೇ ಶಾಸನಗಳ ಅಧ್ಯಯನ ಎಂದರೆ ಅವುಗಳಲ್ಲಿ ಹುದುಗಿರುವ ಚಾರಿತ್ರಿಕ ಸತ್ಯಗಳನ್ನು ಹೊರತೆಗೆಯು-ವುದೇ ಆಗಿದೆ. ಹಾಗೆ ಅವುಗಳಲ್ಲಿ ಇರುವ ವಿಷಯದ ಮೇಲೆ ದೃಷ್ಟಿಕೋನ ಹರಿಸಿದಷ್ಟು ಅದು ರೂಪುಗೊಂಡ ಭಾಷೆಯ ಮೇಲೆ ಹರಿಸುತ್ತಿಲ್ಲ. ಹಾಗೆ ಎಲ್ಲ ಶಾಸನ ತಜ್ಞರು ಸಂಶೋ-ಧನೆಯಲ್ಲಿ ಅದರಲ್ಲಿರುವ ವಿಷಯದ ಮೇಲೆ ತಮ್ಮ ದೃಷ್ಟಿಕೋನವನ್ನು ಕೇಂದ್ರೀಕರಿಸುತ್ತಾರೆ. ಅಲ್ಲಲ್ಲಿ ಕೆಲವರು ಮಾತ್ರ ಶಾಸನ ಬರೆಯಲ್ಪಟ್ಟ ಭಾಷೆ, ಅದರ ರಚನೆ ಕುರಿತು ಚರ್ಚಿಸಿ-ರುವುದನ್ನು ನೋಡಬಹುದಾಗಿದೆ. ಯಾಕೆಂದರೆ ಭಾಷೆ ಅದು ಕಾಲ ಸಂದರ್ಭದ ಹೊಂದುವಷ್ಟು ಬದಲಾಗಿದೆ, ಅದು ಆ ಭಾಷೆಯನ್ನು ಮಾತನಾಡುವ ಭಾಷಿಕರ ಎಲ್ಲ ಬದಲಾವಣೆಗಳನ್ನು ಪ್ರತಿನಿಧಿಯಾಗಿರುತ್ತದೆ.

ಆ ದೃಷ್ಟಿಕೋನದಿಂದ ನೋಡುವುದಾದರೆ ಒಂದು ಶಾಸನದಲ್ಲಿ ಇರುವ ವಿಷಯ ಕುರಿತು ನಡೆಸುವಷ್ಟೇ ಗಹನ-ವಾಗಿ ಅದು ರೂಪುಗೊಂಡ ಭಾಷೆಯನ್ನು ಕುರಿತು ಅಧ್ಯಯನ ಮಾಡುವುದು ಕೂಡ ಮುಖ್ಯವಾದುದು ಎನಿಸುತ್ತದೆ.

ಕನ್ನಡ ಶಾಸನಗಳು ಎಂದರೆ ಕನ್ನಡ ಭಾಷೆಯಲ್ಲಿ ಸಿದ್ಧಗೊಂಡ ಶಾಸನಗಳು. ಈಗ ದೊರೆತಿರುವ ದಾಖಲೆಗಳ ಪ್ರಕಾರ ಕ್ರಿ.ಶ. ೪೫೦ ರಲ್ಲಿ ಮೊದಲು ದೊರೆತ ಹಲ್ಮಿಡಿ ಶಾಸನದಲ್ಲಿ ಕಂಡಿದ್ದು ನಿನ್ನೆ ಮೊನ್ನೆಯ ವರೆಗೆ ದೊರೆತ ಶಾಸನಗಳಲ್ಲಿಯೂ ಬಹುಮಟ್ಟಿಗೆ ಭಾಷಾ ವೈವಿಧ್ಯಮಯತೆ ಇದೆ. ಕೆಲವು ಬಹಳ ವೈವಿಧ್ಯಮಯವಾಗಿರಬಹುದು. ಅಂಥ ಶಾಸನಗಳನ್ನು ಇಲ್ಲಿ ಮಾತ್ರ ಪರಿಗಣನೆಗೆ ತೆಗೆದುಕೊಳ್ಳದೆ ಕನ್ನಡ ಭಾಷಾ ವೈವಿಧ್ಯಮಯದಲ್ಲಿ ಇರುವ ಶಾಸನಗಳನ್ನು ಕೂಡ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

## ಶಾಸನ ಪದದ ಅರ್ಥ :-

ಶಾಸನ ಎಂದರೆ 'ರಾಜಾಜ್ಞೆ' ಎಂದರ್ಥ. ರಾಜನು ತಾನು ಮಾಡಿದ ದಾನದ ವಿಷಯವನ್ನಾಗಲೀ, ಧರ್ಮ ಕಾರ್ಯದ ವಿಷಯವನ್ನಾಗಲೀ ಕೊರೆಯಿಸಿದ ಆಜ್ಞಾಪತ್ರಿಯನ್ನು ಶಾಸನ ಎನ್ನುವರು.

## ಶಾಸನದ ಪದದ ಉತ್ಪತ್ತಿ :-

ಶಾಸನ ಎಂಬ ಪದವು ಸಂಸ್ಕೃತದ ಮೂಲ ಪದ-ವಾಗಿ ಬಂದಿದ್ದು, ಇದು 'ಶಾಸ್' ಎಂಬ ಸಂಸ್ಕೃತದ ಧಾತು ಪದದಿಂದ ಬಂದಿದೆ. 'ಶಾಸ್' ಎಂದರೆ ಆಜ್ಞಾಪಿಸು, ಶಿಕ್ಷಿಸು, ನಿಯಂತ್ರಿಸು ಎಂದರ್ಥ. ಇದು ಇಂಗ್ಲೀಷಿನ Inscription ಎಂಬುದರಿಂದ ಬಂದಿದೆ. ಇದರ ಅರ್ಥ ಕೆತ್ತಿದ್ದು, ಕೊರೆದದ್ದು, Describe ಎಂದರೆ ಅಕ್ಷರಗಳನ್ನು ಕೆತ್ತು, ಕಂಡರಿಸು ಎಂದರ್ಥ.

## ಶಾಸನ ಎಂದರೆ :-

ಸಾಮಾನ್ಯವಾಗಿ ಬಹುಕಾಲ ಬಾಳುವಂತಹ ಶಿಲೆ, ಲೋಹಗಳ ಮೇಲಿನ ಬರಹವನ್ನು ಶಾಸನಗಳೆಂದು ಕರೆಯುತ್ತಾರೆ.

## ಶಾಸನ ಅಧ್ಯಯನದ ಬಗೆ - ಬಗೆ :-

→ ಶಾಸನಗಳ ಬರವಣಿಗೆ ಮೊದಲು ತಾಳೆಗರಿ, ತಾಮ್ರಪಟಗಳು ಇದು ಮರದ ಮೇಲೆ ಬರೆಯುವ ಶಾಸನಗಳು.

→ ಹಿಂದಿನಿಂದಲೂ ಕಲ್ಲುಗಳ ಮೇಲೆ ಬರೆಯುವ ಶಾಸನಗಳು ಸಿಕ್ಕಿವೆ, ಮೊಹೆಂಜೋದಾರೋ ಹರಪ್ಪಾದಲ್ಲಿ ಮುದ್ರೆಗಳ ಮೇಲೆ ಬರೆದ ಇರುವ ಶಾಸನಗಳು ದೊರೆತಿವೆ. ಭಾರತದಲ್ಲಿ ಸಿಂಧೂ ನಾಗರಿಕತೆಯ ಸಂಸ್ಕೃತಿಗೆ ಸಂಬಂಧಿಸಿದ ಹಲವಾರು ಮುದ್ರೆಗಳು ಸಿಕ್ಕಿವೆ. ಆದರೆ ಇವುಗಳ ಮೇಲಿರುವ ಲಿಪಿಗಳ ಬಗ್ಗೆ ಭಿನ್ನಾಭಿಪ್ರಾಯ ಇರುವ ಕಾರಣ ಅಶೋಕನ ಶಾಸನಗಳೇ ಭಾರತದ ಅತೀ ಪ್ರಾಚೀನ ಶಾಸನಗಳಾಗಿವೆ ಎನ್ನುವರು.

→ ಅಶೋಕನಿಂದ ತಾಮ್ರಪಟ ಹಾಗೂ ಬಂಡೆಗಲ್ಲಿನ ಮೇಲೆ ಶಾಸನಗಳನ್ನು ಬರೆಯುವ ಪ್ರಾರಂಭ ಅನುಯಾಯಿಯಾದ ರಾಜರ ಶಾಸನಗಳು ಪ್ರಕಟವಾಗುತ್ತಿದ್ದವು.

→ ಕ್ರಿ.ಶ. 1 ನೇ ಶತಮಾನದಲ್ಲಿ ಅಂತ್ಯದ ವೇಳೆಗೆ ಸಂಸ್ಕೃತ ಪ್ರಮುಖ ಭಾಷೆಯಾಗಿ ರಾಜ ಮಾನ್ಯತೆ ಪಡೆಯಿತು.

→ ಕರ್ನಾಟಕದಲ್ಲಿ ಅಶೋಕನ ಶಾಸನಗಳು ಬ್ರಹ್ಮಗಿರಿ, ಜಟಿಂಗ, ರಾಮೇಶ್ವರ, ಮಸ್ಕಿ, ಸಿದ್ದಾಪುರ, ಮೊದಲಾದ ಕಡೆಗಳಲ್ಲಿ ದೊರೆತಿವೆ. ಈ ಎಲ್ಲಾ ಶಾಸನಗಳು ಬ್ರಾಹ್ಮೀ ಲಿಪಿಯಲ್ಲಿ ಪ್ರಾಕೃತ ಭಾಷೆಯಲ್ಲಿವೆ.

→ 19 ನೇ ಶತಮಾನದ ವೇಳೆಗಾಗಲೇ ಅಶೋಕನ ಶಾಸನಗಳು ಸಿಕ್ಕಿದ್ದರೂ, ಅವುಗಳನ್ನು ಓದಲಾಗಿರಲಿಲ್ಲ. ಕ್ರಿ.ಶ. 1837-38 ರಲ್ಲಿ ಅಶೋಕನ ಬ್ರಾಹ್ಮೀ ಲಿಪಿ ಶಾಸನಗಳನ್ನು 'ಜೇಮ್ಸ್ ಪ್ರಿನ್ಸೆಪ್'ನು ಯಶಸ್ವಿಯಾಗಿ ಓದಿದನು.

→ ಅಜ್ಮೀರದ ಶಾಲೆಯಲ್ಲಿ ಎರಡು ಸಂಸ್ಕೃತ ನಾಟಕಗಳ ಭಾಗಗಳು ಸಿಕ್ಕಿವೆ. ಇವುಗಳಲ್ಲೊಂದು '<u>ಸೋಮದೇವ</u>'ನಿಂದ ರಚಿತವಾದ 'ಲಲಿತವಿಗ್ರಹರಾಜ' ನಾಟಕ. ಇದರಂತೆ ಮಧ್ಯಭಾರತದ ಧಾರ್ ನಗರದಲ್ಲಿ ಮದನನೆಂಬ ಬರೆದ 'ಪಾರಿಜಾತ ಮಂಜರಿ' ನಾಟಕದ ಎರಡು ಅಂಕಗಳು ಸಿಕ್ಕಿವೆ. ಜೊತೆಗೆ ಇದೇ ಧಾರ್ ನಗರದಲ್ಲಿ ಭೋಜರಾಜನ ಕಾಲದಲ್ಲಿ ರಚಿತವಾದ ಎರಡು ಪ್ರಾಕೃತ ಕಾವ್ಯಗಳಲ್ಲಿ ವಿಷ್ಣುವಿನ ಕೂರ್ಮಾವತಾರವನ್ನು ವರ್ಣಿಸಲಾಗಿದೆ.

→ ಮದ್ರಾಸ್ ನ ಪುದುಕೋಟೆಯ ಸಮೀಪದಲ್ಲಿರುವ 'ಕುಡುಮಿಯಾ 'ಮಲೈ' ಬೆಟ್ಟದ ಮೇಲಿನ ಶಿಲಾಶಾಸನವು ಪ್ರಪಂಚದಲ್ಲಿ ಸ್ವರ ಪ್ರಸ್ತಾರವುಳ್ಳ ಸಂಗೀತದ ಏಕೈಕ ಶಾಸನವಾಗಿದೆ.

→ ಉತ್ತರಭಾರತದಂತೆ ದಕ್ಷಿಣ ಭಾರತವು ಮೂಲ ದ್ರಾವಿಡ ಲಿಪಿಯನ್ನು ತನ್ನ ಭಾಷೆಗಳ ಬಳಕೆಗೊಂಡರೂ ಲಿಪಿಯನ್ನು ಹಲವು ಮಾರ್ಪಾಡುಗಳನ್ನು ಮಾಡಿಕೊಂಡು ವೈವಿಧ್ಯತೆ , ಮೆರೆಯಿತು. ಈ ಎಲ್ಲದರಲ್ಲೂ ಶಾಸನಗಳ ಸಂಖ್ಯೆಯಲ್ಲಿ ತಮಿಳುನಾಡು ಪ್ರಥಮ ಸ್ಥಾನ ಪಡೆದರೆ ಕರ್ನಾಟಕ ದ್ವಿತೀಯ ಸ್ಥಾನದಲ್ಲಿದೆ. ಕರ್ನಾಟಕದಲ್ಲಿ ಸುಮಾರು 20,000 ಶಾಸನಗಳನ್ನು ಸಂಗ್ರಹಿಸಲಾಗಿದೆ.

## ಕನ್ನಡ ಭಾಷೆ ಮತ್ತು ಭಾಷಿಕ ರಚನೆಯ ಅಂಶಗಳ ಬಳಕೆ

ಕನ್ನಡ ಶಾಸನದಲ್ಲಿ ಬಳಕೆಯಾದ ಕನ್ನಡ ಭಾಷೆಯನ್ನು, ಭಾಷಿಕ ರಚನೆಯ ದೃಷ್ಟಿಯಿಂದ ಮತ್ತು ನಾಲ್ಕು ಭಾಗಗಳಲ್ಲಿ ವಿಂಗಡಿಸಿ ಕನ್ನಡ ಭಾಷಾ ಬಳಕೆಯ ವೈವಿಧ್ಯತೆ ಕುರಿತು ಚರ್ಚಿಸಬಹುದು ಎನಿಸುತ್ತದೆ.

೦೧. ವರ್ಣಗಳ ಬಳಕೆ
೦೨. ಪದಗಳ ಬಳಕೆ
೦೩. ಸಂಯುಕ್ತಪದಗಳ ಬಳಕೆ
೦೪. ವಾಕ್ಯಗಳ ಬಳಕೆ

### ೦೧. ವರ್ಣಗಳ ಬಳಕೆಯ ವೈವಿಧ್ಯತೆಗಳು

ಯಾವುದೇ ಭಾಷೆ ನಿಂತ ನೀರಲ್ಲ. ಅದು ನಿರಂತರವಾಗಿ ಬದಲಾಗುತ್ತಲೇ ಇರುತ್ತದೆ. ಮೇಲ್ನೋಟಕ್ಕೆ ಅದು ಬದಲಾಗುವುದನ್ನು ಕಾಣದೇ ಹೋದರೂ ಕಾಲಾಂತರದಲ್ಲಿ ಅದು ಬದಲಾವಣೆಗಳನ್ನು ಗುರುತಿಸಲು ಸಾಧ್ಯವಿದೆ. ಹಾಗೆಯೇ ಕನ್ನಡ ಶಾಸನಗಳಲ್ಲೂ ಕೂಡ ವರ್ಣಗಳ ಬಳಕೆಯಲ್ಲಿ ಬದಲಾವಣೆಯಾದ ಕುರುಹುಗಳು ದೊರೆಯುತ್ತವೆ. ಉದಾಹರಣೆಗೆ :- ವ ಕಾರ ಬ ಕಾರವಾಗಿ ಬಳಕೆಯಾಗಿರುವುದನ್ನು ಹಲ್ಮಿಡಿ ಶಾಸನದಲ್ಲೇ ನೋಡಬಹುದಾಗಿದೆ. ಮೂಲ ದ್ರಾವಿಡ ಪದವಾದ ತಮಿಳಿನಲ್ಲಿ ಇರುವ 'ವಾಳ್' ಎಂಬ ಶಬ್ದ ಹಲ್ಮಿಡಿ ಶಾಸನದಲ್ಲಿ 'ಬಾಳ್' ಎಂದು ಬಳಕೆಯಾಗಿದೆ.

## ೦೧. ಶಬ್ದಗಳ ಬಳಕೆಯ ವೈವಿಧ್ಯತೆಗಳು

ಶಬ್ದ ರೂಪದ ಬಳಕೆಯಲ್ಲಿ ಬದಲಾವಣೆಯನ್ನು - ರುದ್ರಭಟ್ಟನ ಶಾಸನಗಳಲ್ಲಿ ನೋಡಬಹುದಾಗಿದೆ. ಇದಲ್ಲದೆ ಅಂದಿನ ಶಬ್ದ ರಚನೆ ಹೊಯ್ಸಳರ ಕನ್ನಡ ಶಾಸನಗಳಲ್ಲೂ ಇದೆ ಎಂದು ವಿದ್ವಾಂಸರು ಹೇಳುತ್ತಾರೆ. ಉದಾಹರಣೆ:- ಪುರಾತನ ಕತೆಗಳು ಪ್ರತಿ ಗ್ರಾಮದಲ್ಲೂ ತಲೆಮಾರಿನ ಎನ್ನುವ ಹಾಗೆ ತಯಾರಿಸಿದಂತೆ ಇರುವ ಕನ್ನಡದಲ್ಲಿ ಆಲೂರು ಸ್ಥಳಕ್ಕೆ ಸೇರಿದ್ದು ಇರಬಹುದು ವೃತ್ತಿಗಳು ಇದ್ದುದು ಎಂಬುದಕ್ಕೆ ಶಾಸನಗಳಲ್ಲಿ ಪ್ರಮಾಣಗಳು ಸಿಗುತ್ತವೆ ಎಂದು ವಿದ್ವಾಂಸರು ತಿಳಿಸುತ್ತಾರೆ.

ಉದಾಹರಣೆಗೆ:- ತಾಳಗುಂದ: ೫ನೇ ಶತಮಾನ, ಹಲ್ಮಿಡಿ: ೬ನೇ ಶತಮಾನ, ಹೊಸಕೋಟೆ: ೭ನೇ ಶತಮಾನ, ಶ್ರವಣಬೆಳಗೊಳ.

## ೦೨. ಕ್ರಿಯಾರೂಪದ ವೈವಿಧ್ಯಮಯ ಬಳಕೆ

ಶಾಸನಗಳಲ್ಲಿ ಬಳಕೆಯಾಗಿರುತ್ತಿರುವ ಕ್ರಿಯಾರೂಪ-ವಾದ ಹೋಗುತ್ತೇನೆ, ಹೋಗುತ್ತೇವೆ, ಹೋಗುತ್ತಾರೆ, ಹೋಗುತ್ತಾರ್ ಎನ್ನುವ ರೂಪಗಳ ಅಂತ್ಯದಲ್ಲಿ ಅ ಸ್ವರ ಸೇರಿದೆ. ಇದು ಹೀಗೆ ಬಂದಿರುವುದು ಗ್ರಂಥದಲ್ಲಿ. ಆದರೆ ಕ್ರಿ.ಶ. ೭ನೇ ಶತಮಾನದ ಕಾಲ ನಿರ್ಣಯ ಮಾಡದ ಹೇಳುವ ಬಿಡಾಳ (ಹಲ್ಮಿಡಿ ಬಳಿಯ ದ) ಶಾಸನದಲ್ಲಿ ಈ ರೂಪ ಕಂಡುಬರುತ್ತದೆ. ಇದನ್ನು ಎಂ. ಎಂ. ಕಲಬುರ್ಗಿ ಅವರು ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ.

"ಸ್ವಸ್ತಿ ಶ್ರೀ ಎರೆಯಂಗರ್ಪ್ಪ ನಿತ್ಯಾಶ್ರಯ ಶ್ರೀ ಪ್ರಥ್ವೀವಲ್ಲಭ ಮಹಾರಾಜ (ಬಾದಾಮಿ ಚಾಲುಕ್ಯ) ಕೀರ್ತಿವರ್ಮ (ರ್) ಕ್ರೆಯಾದ ಕಾರ್ಯದರ್ಶಿಯಾ ಬಯಲಾ ಅರಸಳ್ಗೆ ಕೊಟ್ಟಾರ್"

ಕೊಟ್ಟಾರ್ ರೂಪದಲ್ಲಿ ರ ರ್+ಅ ದಲ್ಲಿ ಅ ಬಳಕೆ ಕಾಣಬಹುದಾಗಿದೆ.

## 08. ವಾಕ್ಯ ರಚನೆಯ ರೀತಿಗಳು.

ಕನ್ನಡದ ವಾಕ್ಯಗಳಲ್ಲಿ ಸಾಮಾನ್ಯವಾಗಿ ಕರ್ತೃ- ಕರ್ಮ- ಮತ್ತು ಕ್ರಿಯಾಪದಗಳು ಕ್ರಮವಾಗಿ ಬರುತ್ತವೆ. ಆದರೆ ಉತ್ತಮ ವಾಕ್ಯಗಳು ಆಗಬೇಕಾದರೆ ಎರಡರಿಂದ ರೀತಿಯಲ್ಲಿ ಒಂದೇ ಒಂದು ಕ್ರಿಯಾಪದ ಬಳಸಿರುವ ವಾಕ್ಯಗಳು ಹಲವಾರು ಶಾಸನದಲ್ಲಿ ನೋಡಬಹುದು.

ಉದಾಹರಣೆಗೆ ಕಪ್ಪೆ ಅರಭಟ್ಟನ ಶಾಸನದ ಈ ಭಾಗವನ್ನು ಗಮನಿಸಬಹುದು.

"ಮಹಾವಿಲಾಸ ... ಶ್ರೀ ಪೃಥ್ವೀವಲ್ಲಭ ... ಶ್ರೀಮತ್ ... - ... - ತನ್ನ ... ಪ್ರಭು ... - ... - ತನ್ನ ... ತನ್ - ... - ತಳ್ಳಾದುದಾನಿ ಬಿಟ್ಟನ್.

ಬಿಟ್ಟನ್ ಎನ್ನುವ ಕ್ರಿಯಾಪದವೊಂದೇ ಇಡೀ ವಾಕ್ಯದಲ್ಲಿ ಬಂದಿರುವುದನ್ನು ನೋಡಬಹುದಾಗಿದೆ.


## ಕರ್ನಾಟಕದಲ್ಲಿ ದೊರೆತ ಕೆಲವು ಶಾಸನಗಳು

1. ಹಲ್ಮಿಡಿ ಶಾಸನ
2. ಬಾದಾಮಿ ಶಾಸನ
3. ಶ್ರವಣಬೆಳಗೊಳ ಶಾಸನ
4. ಗಂಗಾಧರ ಶಾಸನ
5. [illegible] ಶಾಸನ
6. [illegible] ಶಾಸನ
7. ಮಲ್ಲಿನಾಥನ ಶ್ರವಣಬೆಳಗೊಳ ಶಾಸನ
8. ಅತಕೂರು ಶಾಸನ

9. ಐಹೊಳೆ ಶಾಸನ
10. ಚಂದ್ರವಳ್ಳಿ ಶಾಸನ
11. ಪಟ್ಟದಕಲ್ಲು ಶಾಸನ
12. ಶಿರಗಾರ ಶಾಸನ
13. ಲಕ್ಕುಂಡಿ ಶಾಸನ
14. ಬೊಳಗೊಂಡ ಶಾಸನ
15. ಲಕ್ಷ್ಮೇಶ್ವರ ಶಾಸನ
16. ಹಂಪಿ ಶಾಸನ
17. ಬಳ್ಳಿಗಾವೆ ಶಾಸನ
18. ತಮ್ಮಟಕಲ್ಲು ಶಾಸನ
19. ಬಾದಾಮಿ ಶಾಸನ
20. ಮಾವಳ್ಳಿ ಶಾಸನ
21. ಕೊಡಲ ಶಾಸನ
22. ಮಾವಳ್ಳಿ ಶಾಸನ
23. ಕೆಳದಿ ಶಾಸನ
24. ಜಾತ ಶಾಸನ
25. ಹಳೆತೋಟ ಶಾಸನ

## 1. ಹಲ್ಮಿಡಿ ಶಾಸನ :-

ಹಲ್ಮಿಡಿ ಶಾಸನ
(ಕ್ರಿ.ಶ. 450) ಇದೊಂದು ದಾನ ಶಾಸನವಾಗಿದೆ. ದೊರೆತ ಕನ್ನಡ ಶಾಸನ ಪಟ್ಟಿಯ ಮೇಲಾಗಿ [illegible] ಹಲ್ಮಿಡಿ ಎಂಬ ಗ್ರಾಮದಲ್ಲಿ ದೊರೆತಿದೆ. ಇದರ ಭಾಷೆ ಪೂರ್ವದ ಹಳಗನ್ನಡ ಸಾಲುಗಳ ಸಂಖ್ಯೆ 16 ಕೆತ್ತಲಾದ ಅರಸ ಕದಂಬರ ಅರಸ ಕಾಕುಸ್ಥವರ್ಮ


ಹಲ್ಮಿಡಿ ಶಾಸನ
ಊರು: ಹಲ್ಮಿಡಿ, ತಾಲ್ಲೂಕು: ಬೇಲೂರು, ಜಿಲ್ಲೆ: ಹಾಸನ
ಮನೆತನ: ಬನವಾಸಿ ಕದಂಬ, ರಾಜ: ಕಾಕುಸ್ಥವರ್ಮ, ಕಾಲ: ಕ್ರಿ.ಶ. ಸು. ೪೫೦
-: ಶಾಸನದ ಪಾಠ :-
೧ ಜಯತಿ ಶ್ರೀಪರಿಷ್ವಙ್ಗ ಶಾರ್ಙ್ಗ (ವ್ಯಾನತಿ) ರಚ್ಯುತ:
ದಾನವಾಕ್ಷ್ಣೋರ್ಯುಗಾನ್ತಾಗ್ನಿ: (ಶಿಷ್ಟಾನಾನ್ತು) ಸುದರ್ಶನ: ॥
೨ ನಮ: ಶ್ರೀಮತ್ಕದಂಬಪನ್ತ್ಯಾಗಸಂಪನ್ನನ್ಕಲಭೋರ (ನಾ) ಅರಿಕ
೩ ಕುಸ್ಥಭಟ್ಟೋರನಾಳೆ ನರಿದಾವಿ (ಳೆ) ನಾಡುಳ್ ಮೃಗೇಶನಾ
೪ ಗೇನ್ದ್ರಾಭೀಳಭ್ಬಟಹರಪ್ಪೋರ್ ಶ್ರೀಮೃಗೇಶನಾಗಾಹ್ವಯ
೫ ರಿರ್ವ್ವರಾ ಬಟರಿಕುಲಾಮಲವ್ಯೋಮತಾರಾಧಿನಾಥನ್ನಳಪ
೬ ಗಣಪಶುಪತಿಯಾ ದಕ್ಷಿಣಾಪಥ ಬಹುಶತಹವನಾ
೭ ಹವದು (ಳ್) ಪಶುಪ್ರದಾನ ಶೌರ್ಯ್ಯೋದ್ಯಮಭರಿತೋ (ನ್ದಾನ) ಪ
೮ ಶುಪತಿಯೆನ್ದು ಪೊಗಳೆಪ್ಪೊಟ್ಟಣ ಪಶುಪತಿ
೯ ನಾಮಧೇಯನಾಸರಕ್ಕೆಲ್ಲಭಟರಿಯಾ ಪ್ರೇಮಾಲಯ
೧೦ ಸುತನ್ಗೆ ಸೇನ್ದ್ರಕಬಣೋಭಯದೇಶದಾ ವೀರಾಪುರುಷ ಸಮಕ್ಷ
೧೧ ದೆ ಕೇಕಯ ಪಲ್ಲವರಂ ಕಾದೆರಿದು ಪೆತ್ತ ಜಯನಾ ವಿಜ
೧೨ ಅರಸನ್ಗೆ ಬಾಳ್ಗಳ್ಚು ಪಲ್ಮಡಿಉಂ ಮೂಳಿವಳ್ಳಿಉಂ ಕೊ
೧೩ ಟ್ಟಾರ್ ಬಟಾರಿಕುಲದೊನಳಕದಮ್ಬನ್ಕೊಳ್ ಮಹಾಪಾತಕನ್
೧೪ ಇರ್ವ್ವರುಂ ಸಳ್ಬಙ್ಗದರ್ ವಿಜಾರಸರುಂ ಪಲ್ಮಡಿಗೆ ಕುಱು
೧೫ ಮ್ಬಿಡಿವಿಟ್ಟಾರ್ ಅದಾನಳಿವೊನ್ಗೆ ಮಹಾಪಾತಕಮ್ ಸ್ವಸ್ತಿ
೧೬ ಭಟ್ಟರ್ಗ್ಗೀಗದ್ದೆಒಡ್ಡಲಿ ಆ ಪತ್ತೊನ್ದಿ ವಿಟ್ಟಾರಕರ

ಹಲ್ಮಿಡಿ ಶಾಸನದ ಚಿತ್ರ


Principal,
G. P. Porwal Arts, Comm &
V. V. Salimath Sc. College
SINDGI-586128 College Code 5234

ಕನ್ನಡದ ಪ್ರಥಮ ಶಾಸನವಾಗಿದೆ. ಈ ಶಾಸನದಲ್ಲಿ ಮೊದಲ ಅಕ್ಷರಗಳ ಸ್ಪಷ್ಟ ಇದೆ. ಈ ಶಾಸನದ ಪೂರ್ವದ ಹಳೆ ಸಂಸ್ಕೃತ ಪದಗಳು, ಉಳಿದವು ಭಾಗವು ಕನ್ನಡದಲ್ಲಿದೆ. ಈ ಶಾಸನದಲ್ಲಿ ಕೆತ್ತುಬಂದನ್ ಎಂಬ ಅರಿಯಲ್ಗೊ ಮತ್ತು ಮೊರಳ್‌ಪಲ್ಲವ ಎಂಬ ಬಿರುದುಗಳ ರಾಜರನ್ನು ಕಾಣಬಹುದು. 1936 ರಲ್ಲಿ ಡಾ. ಎಂ. ಎಚ್. ಕೃಷ್ಣ ಎಂಬುವವರಿಂದ ಸಂಶೋಧಿಸಲ್ಪಟ್ಟಿತ್ತು. ಇದನ್ನು ಕಲ್ಲಿನ ಮೇಲೆ ಕೆತ್ತಲಾಗಿದೆ. ಇದು ಹಳಗನ್ನಡ ಹಾಗೂ ಬ್ರಾಹ್ಮೀ ಲಿಪಿಗಳನ್ನು ಹೋಲುವಂತಹ ಕನ್ನಡ ಲಿಪಿಯಾಗಿದೆ. ತಾಳಗುಂದದ ಕೆತ್ತಿಸಿದ ಕದಂಬರ ಅರಸ ಕಾಕುತ್ಸ್ಥವರ್ಮನು ಬರೆಸಿದ್ದು. ಆ ಶಾಸನದಲ್ಲಿ ನಲಭೋರನ್ ಸಾಧನೆಯಲ್ಲಿ ಪಲ್ಲವರ ಮತ್ತು ನಾಗರ ಎನ್ನುವ ರಾಜಮನೆತನದವರು, ಕೇಕಯ ಪಲ್ಲವರು ಮತ್ತು ಕದಂಬರ ನಡುವೆ ನಡೆದ ಯುದ್ಧದಲ್ಲಿ ಜಯಗಳಿಸಿದ ವಿಜಯ ಅರಸನಿಗೆ ಪಲ್ಮಡಿ, ಮೂಳ್ವಳ್ಳಿ ಎಂಬ ಗ್ರಾಮಗಳನ್ನು ದಾನವಾಗಿ ನೀಡಿದರು. ಬಾಳ್ಗಳ್ಚು (ಬಾಳ್ + ಕಳ್ಚು) ಅರ್ಥ ಕತ್ತಿ ಎಂದರೆ ಕತ್ತಿಯನ್ನು ತೊಳೆ ಎಂದಾಗುತ್ತದೆ. ಸಂಸ್ಕೃತದಲ್ಲಿ ಇಲ್ಲದ ಳ ಱ, ೞ, ಅಕ್ಷರಗಳನ್ನು ಬಳಸಿ ಮಾಡಲು ಪ್ರಯೋಗಿಸಿದ ಶಾಸನ ಇದಾಗಿದೆ. ಈ ಶಾಸನವು ಶಿಷ್ಟ (ಪ್ರಾಕೃತ) ಪ್ರಸಿದ್ಧ ಗದ್ಯ ಶೈಲಿ ಸಂಪ್ರದಾಯದಲ್ಲಿದೆ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಹಾಗೂ ಇತಿಹಾಸದ ದೃಷ್ಟಿಯಿಂದ ಈ ಶಾಸನ ಅತ್ಯಂತ ಮಹತ್ವವನ್ನು ಪಡೆದುಕೊಂಡಿದೆ. ಹೀಗೆ ಕನ್ನಡದ ಪ್ರಥಮ ಶಾಸನದ ಬಂದಿರುವ ಮೊದಲು ಶಾಸನ ದಾನದ ಪದ್ಧತಿಗಳು ಉತ್ತಮವಾಗಿರುವುದನ್ನು ಮತ್ತು ಆದಿನೆಲ್ಲದ ಸ್ವತಂತ್ರ ಕಾಲವನ್ನು ತಿಳಿಸಿದರೆ ನಮ್ಮ ಹಿಂದಿನ ಜನ ದಾನದತ್ತಿಗಳಿಗೆ ಮತ್ತು ಯುದ್ಧಗಳಿಗೆ ಎಷ್ಟೊಂದು ಮಹತ್ವ ನೀಡುತ್ತಿದ್ದರೆಂಬುದು ನಮಗೆ ತಿಳಿಯುತ್ತದೆ.

## 2. ಬಾದಾಮಿ ಶಾಸನ ಅಥವಾ ಕಪ್ಪೆ ಅರಭಟ್ಟನ ಶಾಸನ
## — ಕ್ರಿ.ಶ. 7 ನೇ ಶತಮಾನ

→ ಕ್ರಿ.ಶ. 7 ನೇ ಶತಮಾನದಲ್ಲಿ ರಚಿತವಾಗಿರುವ ಈ ಶಾಸನವನ್ನು ಬಾದಾಮಿಯಂತಾ ಬಂಡೆಗಲ್ಲಿನ ಮೇಲೆ ಕೆತ್ತಲಾಗಿದೆ.

→ ಸ್ಥಳ :- ಬಾಗಲಕೋಟೆ ಜಿಲ್ಲೆಯ ಬದಾಮಿ ತಾಲ್ಲೂಕಿನ ಕೋಟೆಯಲ್ಲಿರುವ ತಟ್ಟುಕೋಟೆ ಎಂಬ ಸ್ಥಳದ ಪಾದದಲ್ಲಿ ದಕ್ಷಿಣದಲ್ಲಿರುವ ಬಂಡೆಗಲ್ಲಿನ ಮೇಲೆ ಕೊರೆಯಲಾಗಿದೆ.



ಬದಾಮಿ ಶಾಸನದ ಚಿತ್ರ

→ ಹಳೆಗನ್ನಡಕ್ಕೆ ಸೇರಿದ ಈ ಶಾಸನದಿಂದ ಪೂರ್ವದ ಹಳೆಗನ್ನಡ-ವು ಹಳಗನ್ನಡಕ್ಕೆ ಮಾರ್ಪಾ-ಡಾಗುವುದನ್ನು ಗಮನಿಸಬಹುದಾಗಿದೆ.

→ ಕಪ್ಪೆ ಅರಭಟ್ಟನ ಸ್ವಭಾವ ಚಿತ್ರಣವನ್ನು ಈ ಶಾಸನದಲ್ಲಿ ಬಣ್ಣಿಸಲಾಗಿದೆ.

→ ಪ್ರಾರಂಭದಲ್ಲಿ ಗದ್ಯ ಮತ್ತು ಸಂಸ್ಕೃತ ಶ್ಲೋಕವೊಂದನ್ನು ಬಿಟ್ಟರೆ ಉಳಿದೆಲ್ಲವೂ ಭಾಗವು ತ್ರಿಪದಿಯಲ್ಲಿ ರಚನೆಯಾಗಿದೆ.

→ ತ್ರಿಪದಿಯನ್ನು ಮೊಟ್ಟಮೊದಲ ಪ್ರಯೋಗ ಮಾಡಿದ ಶಾಸನವಾಗಿದೆ.

"ಸಾಧುಂಗೆ ಸಾಧು ಮಾಧುರ್ಯಂಗೆ ಮಾಧುರ್ಯ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆರನಲ್ಲ"

## ಬದಾಮಿ ಶಾಸನದ ಶಿಲ್ಪ :-

ಕಪ್ಪೆ ಅರಭಟ್ಟ ಎಂಬುವನು ಪ್ರಸಿದ್ಧ ಐತಿಹಾಸಿಕ ವ್ಯಕ್ತಿಯಾಗಿರಬಹುದು. ಇವನ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವು ದೊರೆಯುತ್ತಿಲ್ಲ. ಅವನು ತನ್ನ ಶೌರ್ಯದ ಬಗ್ಗೆ ಪ್ರಮುಖವಾದ ವಿವರಣೆಯಾಗಿ ಮಾತನಾಡಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ಕ್ರಿ.ಶ. 7 ನೇ ಶತಮಾನದ ಬದಾಮಿ ಶಾಸನವು ಅನೇಕ ಕಾರಣಗಳಿಂದಾಗಿ ಮುಖ್ಯವಾಗಿದೆ. ಇದು ಕರ್ನಾಟಕದ ಆಪ್ತತೆ ಅತಿಸಿಗುವ ದಾಖಲೆಗಳನ್ನು ಮಾತ್ರ-ವಾಗಿ ಒದಗಿಸುತ್ತದೆ. ಇದು ಕನ್ನಡ ಮತ್ತು ಸಂಸ್ಕೃತಗಳಲ್ಲಿ ರಚಿತವಾಗಿರುವ ದ್ವಿಭಾಷಾ ಶಾಸನ. ಇದರ, ಕಪ್ಪೆ ಅರಭಟ್ಟನನ್ನು ಕುರಿತು ಪದ್ಯಗಳಲ್ಲಿರುವ ಕನ್ನಡದಲ್ಲಿ ಮತ್ತು ಈ ಭಾಷೆಯ ಅತ್ಯಂತ ಹಳೆಯ ಛಂದೋಬದ್ಧ-ಗಳಲ್ಲಿ ಒಂದಾದ ತ್ರಿಪದಿಯಲ್ಲಿ ರಚಿತವಾಗಿದೆ. ತ್ರಿಪದಿಯು ದ್ರಾವಿಡ ಮೂಲಗಳಿಂದ ಬಳಕೆಯಾಗುತ್ತಿರುವ ಹುಟ್ಟಿಕೊಂಡಿದೆ. ಈ ಶಾಸನವು ಕನ್ನಡದಲ್ಲಿ ಶ್ಲೋಕರೂಪ ಮೊದಲನೆಯ ತ್ರಿಪದಿಗಳನ್ನು ಒಳಗೊಂಡಿದೆ.

## 3. ಶ್ರವಣಬೆಳಗೊಳ ಶಾಸನ :-

ಶ್ರವಣಬೆಳಗೊಳದ ಸಂಬಂಧಿಸಿದಂತೆ ಶಾಸನವು 7ನೇ ಶತಮಾನದ ಕನ್ನಡ ಭಾಷೆಯ ಪ್ರಾಚೀನ ಕಾವ್ಯದ ಶಾಸನಗಳಲ್ಲಿ ಒಂದಾಗಿದೆ. ಈ ಶಾಸನವು ಶ್ರವಣಬೆಳಗೊಳದ ಕಂತೆ ಸಂಬಂಧಿಸಿದಂತೆ ತಿಳಿಸುತ್ತದೆ. ಇನ್ಸ್ಕ್ರಿಪ್ಷನ್ ಆಫ್ ಕ್ಲಾಸಿಕಲ್ ಕನ್ನಡ ಸ್ಕ್ರಿಪ್ಟ್ ಪ್ರಕಾರ ಕ್ರಿ.ಶ. 700 ರ ಕಾಲಮಾನದ ಶಾಸನವು

ಸಾಂಸ್ಕೃತಿಕ ಮಾಹಿತಿಗಳನ್ನು ಮತ್ತು ಆಂತರಿಕಸೌಂದರ್ಯ ವ್ಯಕ್ತಪಡಿಸುತ್ತದೆ. ಇದು ಕನ್ನಡ ಸಾಹಿತ್ಯದ ಅಭಿವೃದ್ಧಿಯ ಅಧ್ಯಯನಕ್ಕೆ ಬಹಳ ಮುಖ್ಯವಾಗಿದೆ. ಈ ಶಾಸನವು ಶ್ರವಣಬೆಳಗೊಳದ ಜೈನ ಸಂಪ್ರದಾಯ ಮತ್ತು ಸ್ಥಳಕ್ಕೆ ತನ್ನ ಪ್ರಯೋಗವನ್ನು ("ದೇವತೆಗಳ ಜಗತ್ತು") ಬಳಕೆ ಮಾಡುತ್ತದೆ.



ಆಧುನಿಕ ಕನ್ನಡ ಲಿಪಿಯಲ್ಲಿ ಪಠ್ಯ

ಸುರಚಾಪಂ ಬೋಲೆ ವಿದ್ಯುಲ್ಲತೆಗಳ
ತೆರವೋಲ್ ಮಂಜುವೋಲ್ ತೋರಿ ಬೇ
ಗಂ ಪೆರ್ಗಿಂ ಶ್ರೀ ರೂಪ ಲೀಲಾ ಧನ ವಿಭವ
ಮಹಾರಾಶಿಗಳ್ ನಿಲ್ಲವಾರ್ಗಂ
ಪರಮಾರ್ತ್ಥಂ ಮೆಚ್ಚೆ ನಾನ್ ಈ ಧರಣಿಯೊಳ್
ಇರಲಾರೆ ಎನ್ದು ಸನ್ಯಾಸನಂ ಗೆ
ಯ್ದುರಾ ಶತ್ರುನ ನನ್ನಿಸಿದ ಪ್ರವರ
ಮಾನಿಮತಿನ್ ದೇವಲೋಕಕ್ಕೆ ಸನ್ದಾನ್.

## 4. ಅಜ್ಜನವಾಡ ಶಾಸನ (ಕ್ರಿ.ಶ. 1260 ಸುಮಾರು ಕಾಲ) :-

ಸ್ಥಳ :→ ಬೆಳಗಾವಿ ಜಿಲ್ಲೆಯ ಹುಕ್ಕೇರಿಯ ಅಜ್ಜನವಾಡಿ ಗ್ರಾಮದ ಸಿದ್ದೇಶ್ವರ ನಂದಿಯ ಆಲಯದಲ್ಲಿ ದೊರೆತಿದೆ.

ಬಸವಣ್ಣನವರ ಜೀವನ, ಇತಿಹಾಸ ಹಾಗೂ ಅವರ ವಿಚಾರಧಾರೆ-ಯ ಮೇಲೆ ಬೆಳಕು ಚೆಲ್ಲುವ ಶಾಸನವಾಗಿದೆ.

→ ಇದೊಂದು ದಾನ ಅಥವಾ ದತ್ತಿ ಶಾಸನವಾಗಿದೆ.

Principal,
G. P. Porwal Arts, Comm &
V. V. Salimath Sc. College
SINDGI-586128. College Code

## ಅಪೂರ್ಣವಾದ ಶಾಸನದ ಸಾಲು ಸಾಲುಗಳು

ಮಣಿಕಟ್ಟಿದ ಪ್ರಾಂತಿನ
ಬಂಗಾರದ ಶಂಖ ಚಕ್ರ ಬಿಟ್ಟ ಕಾಲಿನ
ಸಂಗಂ ಸಂಗನ ಬಸವನ
ಸಂಗಮದ ಮಲ್ಲ ಚಕ್ರವಾಳ (ಕ.)ನನ ಮಠಂ ॥

ಮಣಿಕಟ್ಟಿದ ಕಾಲಿನ ಸಂಗನ ಬಸವನ
ಉತ್ತರಾದಿ ಮಾರ್ಗ ಪ್ರಾಪ್ತಿಯಿಂದ ಮತ್ತೆ ಮನೆಯಿಂದ
ಪ್ರಾಂತಿನಿಂದ, ಬಂಗಾರದ ಮತ್ತು ಅಂಕದ
ಸಿದ್ಧಿಯ ಬೀದಿಯ ಚಕ್ರವನ್ನು ಅನುಗ್ರಹಿಸಿ.

ಪ್ರಸ್ತುತದ ಬಗ್ಗೆ

ಮುಖ್ಯ ಬರಹದಲ್ಲಿ ಬಸವಣ್ಣನನ್ನು ಸಂಬಂಧಿಸಿದ ಅತ್ಯಂತ ಮಹತ್ವದ 1260 ಇಸವಿಯ ಅಪೂರ್ಣವಾದ ಶಾಸನದ ಸಾಲು ಸಾಲುಗಳನ್ನು ಪ್ರತಿಯಂತೆಯೇ ಕೊಟ್ಟಿದೆ. ಪ್ರಸ್ತುತದಲ್ಲಿ ದೊರೆತಿರುವ 26 ಅಧ್ಯಾಯಗಳಲ್ಲಿ ಪ್ರಶ್ನೆಯೊಂದರ ಕೊನೆಗೆ ಉತ್ತರದ ಮಾದರಿಯಲ್ಲಿ ಬರೆಯಲಾಗಿದೆ. ಮಹತ್ವದ ಪರಂಪರೆಯ ಪ್ರಯೋಗವಾದ ಬಸವಣ್ಣನ ಜನನ, ಹುಟ್ಟು ಮತ್ತು ನಾಡಿನ ಇತಿಹಾಸಗಳ ಬಗ್ಗೆ ಸಾರವಾದ ಚರಿತ್ರೆ, ಕಲಚೂರಿ ಮನೆತನದ ಇತಿಹಾಸ, ಬಿಜ್ಜಳನ ಆಡಳಿತ ಸಮಯದ ಬಸ್ತಾರ, ಅವನ ಧರ್ಮ (ಅವನ ಜನನವಲ್ಲ, ಅವನ ಕುಲದ ಬಗ್ಗೆ, ಹೋಲಿಕೆ ೩1), ಅವನ ಕೊನೆಯ ಯಾತ್ರೆ ಕಾಲದ ಇತ್ಯಾದಿಗಳ ಬಗ್ಗೆ ಸಂಕ್ಷಿಪ್ತ ಚರಿತ್ರೆಯಿದೆ.

ಇದರಲ್ಲದೆ ಮುಖ್ಯವಾದುದು ಅಪೂರ್ಣವಾದ ಶಾಸನವು. ಈ ಶಾಸನ ಪ್ರೊಫೆಸರ್ ಅಪ್ರಂತಿಕ ಸಹ ಅನುಬಂಧಿಸಿದ್ದಾರೆ.

## 5. ಕುವರ ಲಕ್ಷ್ಮಣ ಶಾಸನ (ಕ್ರಿ.ಶ. 1220)

→ ಕಾಲ - ಕ್ರಿ.ಶ. 1220

→ ಸ್ಥಳ - ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಹಳೇಬೀಡಿನ ಹೊಯ್ಸಳೇಶ್ವರ ದೇವಸ್ಥಾನದ ಪ್ರಾಕಾರದಲ್ಲಿ (ಬಲಿಪೀಠ, ಗರುಡಗಂಬದ ಬಳಿ) ಹೊರವಲಯದ ಗೋಡೆ ಪಕ್ಕದ ಕಡೆ ಇರುವ ಒಂದು ಕಲ್ಲಿನ ಕಂಬದ ಮೇಲೆ ಈ ಶಾಸನವನ್ನು ಕೆತ್ತಲಾಗಿದೆ.

→ ಇದೊಂದು ಸ್ಮಾರಕ ಶಾಸನವಾಗಿದೆ.

→ ಕುವರ ಲಕ್ಷ್ಮಣನು ಈ ಶಾಸನದ ಕೇಂದ್ರ ವ್ಯಕ್ತಿಯಾಗಿರುವುದರಿಂದ ಈ ಶಾಸನವನ್ನು ಕುವರ ಲಕ್ಷ್ಮಣ ಶಾಸನವೆಂದು ಕರೆಯುವರು. ಇದು ಹಳೇಬೀಡಿನಲ್ಲಿ ದೊರೆತಿರುವುದರಿಂದ ಇದನ್ನು ಹಳೇಬೀಡಿನ ಕುವರ ಲಕ್ಷ್ಮಣ ಶಾಸನವೆಂದು ಕರೆಯುವರು.

→ ಇಮ್ಮಡಿ ಬಲ್ಲಾಳನು ಸತ್ತಾಗ ಅವನ ಪರವಾಗಿ ಸೇನಾಧಿಪತಿಯಾದ ಕುವರ ಲಕ್ಷ್ಮಣ ಮತ್ತು ಅವನು ತನ್ನ ಪತ್ನಿ ಸಹಿತ ಒಂದು ಸಾವಿರ ಅನುಯಾಯಿಗಳೊಡನೆ ಪ್ರಾಣತ್ಯಾಗ ಮಾಡಿದನು, ಎಂಬ ವಿವರ ಈ ಶಾಸನದಲ್ಲಿದೆ. ಅಲ್ಲದೆ ಈ ಶಾಸನದ ಮುಂದಿನ ಭಾಗದಲ್ಲಿಯೂ ಇಮ್ಮಡಿ ಬಲ್ಲಾಳನ ಆಳಿದ ಸಿಂಹಳ-ರಾಜ್ಯಗಳು ಮನೆತನಗಳು ಇಲ್ಲಿವೆ.

→ ವೇಳೆವಾಳಿ (ಗರುಡರು) ರಾಜನು ಸತ್ತಾಗ ಅವನೊಡನೆ ಸಾಯುವೆನೆಂದು ಪ್ರತಿಜ್ಞೆಯನ್ನು ಕೈಗೊಂಡು ಅದರಂತೆ ನಡೆದುಕೊಳ್ಳುವವರನ್ನು ವೇಳೆವಾಳಿಗಳು ಎಂದು ಕರೆಯುತ್ತಾರೆ. ವೇಳೆವಾಳಿಗಳ ಮತ್ತೊಂದು ಹೆಸರೇ ಗರುಡರು. ಈ ಗರುಡ ಪದ್ಧತಿಯು ಹೊಯ್ಸಳರ ಕಾಲದಲ್ಲಿ ಹೆಚ್ಚಾಗಿತ್ತು. ಇದನ್ನು ಪ್ರತಿಬಿಂಬಿಸುವ ಶಾಸನವೇ ಕುವರ ಲಕ್ಷ್ಮಣ ಶಾಸನವಾಗಿದೆ.

→ ಈ ಶಾಸನವನ್ನು ಬಿ. ಎಲ್. ರೈಸ ಅವರು 1902ರಲ್ಲಿ 'ಎಪಿಗ್ರಾಫಿಯಾ ಕರ್ನಾಟಿಕಾ' ಮಾಲೆಯ ಎರಡನೆಯ ಸಂಪುಟದಲ್ಲಿ ಮೊದಲಿಗೆ ಮತ್ತೆ ಅನುವಾದಗಳೊಂದಿಗೆ ಪ್ರಕಟಿಸಿದರು.

## 6. ಚಂದ್ರವಳ್ಳಿ ಶಾಸನ :-


ಕದಂಬ ರಾಜ್ಯದ ಸ್ಥಾಪಕ ಮಯೂರವರ್ಮನ ಕಾಲದ ತಾಳಗುಂದ ಶಾಸನವನ್ನು ಬಿಟ್ಟರೆ ಪ್ರಸಿದ್ಧ ಮಾಹಿತಿಯನ್ನು ನೀಡುವ ಚಿತ್ರದುರ್ಗ ಬಳಿಯ ಚಂದ್ರವಳ್ಳಿ ಶಾಸನ. 4 ನೇಯ ಶತಮಾನದ ಈ ಶಾಸನವನ್ನು ಬೆಳಕಿಗೆ ತಂದವರು ಖ್ಯಾತ ಪ್ರಾಕ್ತನ ವಿದ್ವಾಂಸರಾದ ಡಾ. ಎಂ. ಎಚ್. ಕೃಷ್ಣರು.



ಈ ಶಾಸನದ ಭಾಷೆ ಪ್ರಾಕೃತ. ಈ ಶಾಸನದ ಕೆಲ ಸಾಲು. ಮಯೂರ ವರ್ಮನು ಕೆರೆಯನ್ನು ಕಟ್ಟಿಸಿದ ವಿಚಾರವು ಇದರಲ್ಲಿದೆ. ಶಾಸನದ ಕೊನೆಯಲ್ಲಿ 'ತುಡಿಗೊಂಡವು' ಎಂಬ ಒಬ್ಬ ವ್ಯಕ್ತಿ ಸೂಚಿತವಾಗಿದೆ. ಇಲ್ಲಿ ಕೊಪಣ ಎಂಬುವುದು ಪ್ರಾಚೀನ ಕಾಲದ ಕರ್ನಾಟಕದ ಪ್ರಸಿದ್ಧ ಪಟ್ಟಣವಾಗಿತ್ತು. ಇದು ಈಗಿನ ರಾಯಚೂರು ಜಿಲ್ಲೆಯ ಕೊಪ್ಪಳದ ಹಿಂದಿನ ಹೆಸರು. ಇದಕ್ಕೆ ಕೋಪಣ ಎಂಬ ಹೆಸರಿನ ಕಾಲ ಇದ್ದವು.

## 7. ಅಶೋಕನ ಬ್ರಹ್ಮಗಿರಿ ಶಾಸನ :-

ಕ್ರಿ. ಪೂ. 3ನೇ ಶತಮಾನದಲ್ಲಿ ರಚನೆಗೊಂಡ ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ 'ಇಸಿಲ' ಎಂಬ ಶಬ್ದ ಪ್ರಯೋಗಗೊಂಡಿದೆ. ಈ ಶಬ್ದವೇ ಕನ್ನಡದ ಪ್ರಾಚೀನ ಪದವಾಗಿದೆ ಎಂದು ಡಿ. ಎಲ್. ನರಸಿಂಹಾಚಾರ್ಯರ ಅಭಿಪ್ರಾಯ. ಇಸಿಲ ಎಂದರೆ ಕೋಟೆಯಿಂದ ಸುತ್ತುವರಿದ ಊರು.




ಬ್ರಹ್ಮಗಿರಿ ಭಾರತದ ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಪ್ರದೇಶದಲ್ಲಿ ಸ್ಥಿತವಾಗಿದೆ. ಪ್ರಸಿದ್ಧ ಅಶೋಕ ಇದು ಗೌತಮ ಬುದ್ಧನನ್ನು (ಗೌತಮ ಬುದ್ಧ ಎಂದು, ನಿಜ ಕರೆಯಲಾಗುತ್ತದೆ) ಮತ್ತು ಅವರ ಕಾಲದ ಅವಶೇಷ ಪಾಲನಾತ್ಮಕ ಸ್ಥಳವಾಗಿದೆ.

ಅವರು ಬಿಟ್ಟ ಪ್ರಸಿದ್ಧ ಕಾವ್ಯ ಸಂಕಲ (ಸಿದ್ದಾಪುರ ಮಂಡಲ) ದಲ್ಲಿ ಬಿಟ್ಟಿರುವವರು. ಈ ಸ್ಥಳ ಮೊದಲು 1891 ರಲ್ಲಿ ಬೆಂಜಮಿನ್ ಲೂಯಿಸ್ ರೈಸ್ ಅವರಿಂದ ಅನ್ವೇಷಿಸಲ್ಪಟ್ಟಿತು. ಅವರು ಚಿತ್ರದುರ್ಗ ಅಶೋಕನ ಶಿಲಾ ಶಾಸನಗಳನ್ನು ಇಲ್ಲಿ ಕಂಡುಹಿಡಿದರು. ಈ ಶಿಲಾ ಶಾಸನಗಳು ಈ ಪ್ರದೇಶವನ್ನು ಇಸಿಲ ಎಂದು ಕರೆಯಲಾಗುತ್ತಿತ್ತು ಮತ್ತು ಮೌರ್ಯ ಸಾಮ್ರಾಜ್ಯದ ದಕ್ಷಿಣದ ವ್ಯಾಪ್ತಿಯನ್ನು ಸೂಚಿಸಿದೆ ಎಂದು ಸೂಚಿಸುತ್ತದೆ.

→ ಭೂಪ್ರದೇಶ ಪ್ರದೇಶವು 120 ಮೈಲ್‌ಗಳ ಉತ್ತರದ ಗ್ಲೇಸಿಯರ್ ಹೊಂದಿದೆ.

→ ಸುಮಾರು ಸಾಲ್ತೋರೋ ಪರ್ವತಶ್ರೇಣಿ ಉದ್ದ ಮತ್ತು 200 ಮೈಲ್‌ಗಳ ಪೂರ್ವ- ಪಶ್ಚಿಮ ಮತ್ತು 100 ಮೈಲಿ ಉತ್ತರ- ದಕ್ಷಿಣಕ್ಕೆ ಹಂಚಿಕೊಂಡಿದೆ.

→ ಇಲ್ಲಿ ಹಿಮಖಂಡ ಮತ್ತು ಶಿಲಾ ಸ್ತರಗಳು ಮತ್ತು ನೀರ್ಗಲ್ಲುಗಳಿವೆ.

→ ಇಲ್ಲಿ ಹಿಮಖಂಡವು ಅತ್ಯಂತ ಎತ್ತರದ ಯುದ್ಧಭೂಮಿ ಪ್ರ.ಪಂ 2ನೇ ಉದ್ದವಾದ ಹಿಮನದಿ ಎನಿಸಿಕೊಂಡಿದೆ.

→ 1947ರಲ್ಲಿ, ಮೊಹಮ್ಮದ್ ಅಲಿ ಪಾಕಿಸ್ತಾನ ಪ್ರಾಂತ್ಯ ಸ್ವಾತಂತ್ರ್ಯದ ನಂತರ ಗಿಲ್ಗಿಟ್ ಸ್ವಾತ್ ಅನ್ನು ಮತ್ತೊಮ್ಮೆ ಯತ್ನವನ್ನು ಮಾಡಿದರು.

→ ಈ ಪ್ರದೇಶವನ್ನು 1956ರಲ್ಲಿ ಕೇಂದ್ರ ಮತ್ತು ಚೀನಾ -ನಂತರ ಪಾಕಿಸ್ತಾನ ಸೇನೆ 1965ರ ಮತ್ತು 1978ರಲ್ಲಿ ಮತ್ತೊಮ್ಮೆ ಯತ್ನವನ್ನು ಮಾಡಿದರು.

## 8. ಅತಕೂರ ಶಾಸನ :-

ಕ್ರಿ.ಶ. ೯೫೦ರಲ್ಲಿಯ ಈ ಶಾಸನದಲ್ಲಿ ರಾಷ್ಟ್ರಕೂಟರ ಮೂರನೆಯ ಕೃಷ್ಣ, ಬೂತುಗ ಮತ್ತು ಅವನ ಸೇವಕ ಮಣಲರ ಚೋಳರ ರಾಜಾದಿತ್ಯನ ಮೇಲೆ ಯುದ್ಧ ಮಾಡಿ ಮತ್ತು ರಾಜಾದಿತ್ಯನನ್ನು ಕೊಂದ ಬಗ್ಗೆಯಾಗಿದೆ. ಎರಡನೆಯದಾಗಿ ಆತ ಮಣಲರ ಆತ ಪ್ರೀತಿಯ ನಾಯಿಯೊಂದು ಹೋರಾಡಿದ ಬಗ್ಗೆಯನ್ನು ಪ್ರತಿನಿಧಿಸುತ್ತದೆ, ಹೇಳುತ್ತದೆ.




ಬೂತುಗ ತನ್ನ ಸೇವಕನು 'ಮಣಲರನು ಶೌರ್ಯ', ಬೆಳುವೊಲ' ಎಂಬ ಮಣಲರ 'ಕಾಳಿ' ಎಂಬ ನಾಯಿಯನ್ನು ಬೇಟೆ ಬಿಡುತ್ತಾನೆ. ಅಷ್ಟೇ ಅಲ್ಲ, ಈ ನಾಯಿ ದೊಡ್ಡ ಹಂದಿಯೊಂದನ್ನು ಕಚ್ಚಿ ಅದನ್ನು ಕೊಂದು ತಾನು ಸಾಯುತ್ತದೆ. ಆಗ ಮಣಲರು ಅದಕ್ಕೊಂದು ಆಕಲ್ಲು ನೆಟ್ಟು, ಅದರ ಪೂಜೆಗಾಗಿ ಭೂಮಿಯನ್ನು ಕೊಟ್ಟು, ಅದನ್ನು ಕಾಯುವ ದಾರಿ ಈ ಕಲ್ಲು ಪೂಜಿಸಿದ ಬಳಿಕ ಪೂಜಿಸಬೇಕೆಂದು ಶಾಸನ ಬರೆಸಿದ್ದಾನೆ. ಈಗ ಈ ಶಾಸನ ಬೆಂಗಳೂರಿನ ಮ್ಯೂಸಿಯಂನಲ್ಲಿದೆ. ಇದು ಮಂಡ್ಯ ಜಿಲ್ಲೆಯ, ಮಂಡ್ಯ ತಾಲೂಕಿನ ಅತಕೂರಿನ ಚೆಲ್ಲೇಶ್ವರ ದೇವಾಲಯದ ಮುಂದೆ ಇದ್ದ ಶಾಸನ.

Principal,
G. P. Porwal Arts, Comm &
V. V. Salimath Sc. College
SINDGI-586128

## ೭. ಐಹೊಳೆ ಶಾಸನ :-

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಐಹೊಳೆ ಗ್ರಾಮದ ಮೇಗುತಿ ಎಂಬ ದೇವಾಲಯದ ಪೂರ್ವ ಪಕ್ಕದ ಗೋಡೆಯಲ್ಲಿ ಈ ಶಾಸನವಿದೆ. ಸುಮಾರು ಐದು ಅಡಿ ಉದ್ದವಾಗಿಯೂ ಎರಡು ಕಾಲು ಅಡಿ (೨.೧/೪) ಅಗಲವಾಗಿಯೂ ಇರುವ ಈ ಶಾಸನದ ಕಾಲ ಕ್ರಿ. ಶ. ೬೩೪-೬೩೫. ಭಾಷೆ ಸಂಸ್ಕೃತ; ಲಿಪಿ ಹಳೆಗನ್ನಡ. ಈ ಶಾಸನದ ಕವಿ ರವಿಕೀರ್ತಿಯು ತನ್ನನ್ನು ಕಾಳಿದಾಸ ಭಾರವಿಯರಿಗೆ ಸಮನೆಂದು ಹೇಳಿಕೊಂಡಿದ್ದಾನೆ.




ರವಿಕೀರ್ತಿ ಈ ಶಾಸನದ ಮೂಲಕ ನಾಲ್ಕು ಉಲ್ಲೇಖಗಳನ್ನು

೧. ಚಾಲುಕ್ಯರ ಇತಿಹಾಸದ ಪರಿಚಯ.

೨. ಹರ್ಷನ ಸೋಲು ಇಮ್ಮಡಿ ಪುಲಿಕೇಶಿಯ ಜಯ

೩. ಸಂಸ್ಕೃತ ಭಾಷೆಯ ಮೇಲೆ ತನಗಿರುವ ಪ್ರಭುತ್ವ

೪. ಕಾಳಿದಾಸ, ಭಾರವಿಯರಂತೆ ತಾನೂ ಶ್ರೇಷ್ಠ ಕವಿ ಎಂಬುದನ್ನು ಸಾರಿಕೊಳ್ಳುವುದು.

೫. ತನ್ನನ್ನು ಕಾಳಿದಾಸ ಭಾರವಿಗೆ ಸಮ ಎಂದು, ಹೇಳಿಕೊಂಡಿದ್ದಾನೆ. ಹೀಗೆ ಐತಿಹಾಸಿಕವಾಗಿ ಮತ್ತು ಸಾಹಿತ್ಯಕವಾಗಿ ಶಾಸನಗಳಲ್ಲಿ ಐಹೊಳೆಯ ಈ ಶಾಸನ ವಿಶಿಷ್ಟ ಸ್ಥಾನ ಪಡೆದಿದೆ.

## 10. ತಾಳಗುಂದ ಶಾಸನ :-



ತಾಳಗುಂದ ಶಾಸನಗಳು ಕನ್ನಡದ ಹಳೆಯ ಶಿಲ್ಪದ ಶಾಸನಗಳು. ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕಿನ ತಾಳಗುಂದ ಗ್ರಾಮದಲ್ಲಿದೆ. ಇಲ್ಲಿನ ಒಂದು ಶಾಸನವು ಈವರೆಗೆ ಸಿಕ್ಕಿರುವ ಕನ್ನಡದ ಅತಿ ಹಳೆಯ ಶಾಸನವೆಂದು ಗುರುತಿಸಲಾಗಿ ಪ್ರತಿಪಾದಿಸಲಾಗಿದೆ. ಇದುವರೆಗೆ ಹಲ್ಮಿಡಿ ಶಾಸನವು ಕನ್ನಡದ ಅತಿ ಹಳೆಯ ಶಾಸನವೆಂದು ಪರಿಗಣಿತವಾಗುತ್ತಿತ್ತು.

ಇದರ ಅಧ್ಯಯನದಂತೆಯೂ ಇದು ಹಲ್ಮಿಡಿಯಿಂದ ಹಾಗೆಂದು ಪ್ರಾಚ್ಯವಸ್ತು ಇಲಾಖೆ ಪ್ರತಿಪಾದಿಸಿದೆ. ಈ ಮೂಲಕ ಕನ್ನಡ ಬರವಣಿಗೆಯ ಇತಿಹಾಸವು ಸುಮಾರು ಒಂದು ನೂರು ವರ್ಷಗಳಷ್ಟು ಹಿಂದೆ ಹೋದಂತಾಗಿದೆ.

ತಾಳಗುಂದದ ಪ್ರಣವೇಶ್ವರ ದೇವಸ್ಥಾನದ ಆವರಣದಲ್ಲಿ ಪುರಾತತ್ತ್ವ ಇಲಾಖೆಯಿಂದ ೨೦೧೬-೧೭ರಲ್ಲಿ ನಡೆಸಿದ ಉತ್ಖನನದ ವೇಳೆ ಈ ಶಾಸನ ಪತ್ತೆಯಾಗಿತ್ತು. ಇದರ ಅಧ್ಯಯನಕ್ಕೆ ಆಸಕ್ತಿ ವಹಿಸಿದ ಕೇಂದ್ರದ ಪುರಾತತ್ತ್ವ ಇಲಾಖೆ ಇದರ ಪ್ರಾಚೀನತೆಯ ಅಂಶಗಳನ್ನು ಬಹಿರಂಗಪಡಿಸಿತು. ಇದರಂತೆ, ಈ ಶಾಸನವೇ ಕನ್ನಡದ ಮೊದಲ ಶಾಸನವೆಂದು ಪರಿಗಣಿಸಲ್ಪಟ್ಟಿದೆ.


ಈ ರಾಜನ ಆಳ್ವಿಕೆಯ ಅವಧಿ ಕ್ರಿ.ಶ. ೨೨೦-೪೫೦ ಇರಬಹುದೆಂದು ಅಭಿಪ್ರಾಯಪಡಲಾಗಿದೆ. ಈ ರಾಜ್ಯ ಕದಂಬರ ಕಾಲದ ರಾಜವಂಶದ ಆಳ್ವಿಕೆಯಲ್ಲಿ ಉಳಿದಿರುವ ಬಗ್ಗೆ ತಿಳಿದುಬಂದಿದೆ.

ಮಯೂರ ಎಂಬ ಬ್ರಾಹ್ಮಣನು ಕದಂಬ ವಂಶದ ಬ್ರಾಹ್ಮಣರನ್ನು ಇವರು ಶಿಕ್ಷಣ ಪಡೆಯಲು ಈ ರಾಜ್ಯ ಬಿಟ್ಟು ಹೋಗುತ್ತಿದ್ದ. ಪಲ್ಲವರ ರಾಜಧಾನಿಯಾದ ಕಂಚಿಗೆ ಹೋಗಿ ಅಲ್ಲಿ ಕಾವಲುಗಾರರಿಂದ ಅವಮಾನಕ್ಕೆ ಒಳಗಾಗಿ ಕ್ಷತ್ರಿಯ ಧರ್ಮ ಸ್ವೀಕರಿಸಿದ. ರಾಜನ ಸ್ಥಾನ ಪಡೆದು ಕ್ಷತ್ರಿಯ ರಾಜನ ಎಂದು ಒಪ್ಪಿಕೊಳ್ಳಲಾಯಿತು ಎಂಬ ಶಾಸನವು ಹೇಳುತ್ತದೆ ಎಂದು ತಿಳಿಯಲಾಗಿದೆ.

ಕ್ರಿ.ಶ. ೩೪೫ರಲ್ಲಿ ಮಯೂರವರ್ಮ ಕದಂಬ ಸಾಮ್ರಾಜ್ಯವನ್ನು ಸ್ಥಾಪಿಸಿದ. ಉತ್ತರ ಕನ್ನಡ ಜಿಲ್ಲೆಯ ಶಿರಸಿ ಸಮೀಪದ ಬನವಾಸಿ ಕದಂಬರ ರಾಜಧಾನಿಯಾಗಿತ್ತು. ಮಯೂರವರ್ಮ ೩೬೫ರಲ್ಲಿ ಮೃತಪಟ್ಟ ನಂತರ ಕಂಗ-ವರ್ಮ, ಭಗೀರಥ ವರ್ಮ, ಕಾಕುತ್ಸ್ಥ ವರ್ಮ ಮೊದಲಾ-ದವರು ಕ್ರಿ.ಶ. ೩೬೫-೫೪೦ರ ವರೆಗೆ ಆಳ್ವಿಕೆ ನಡೆಸಿದ್ದರು. ಇವರ ಆಳ್ವಿಕೆಯಲ್ಲಿ ರಾಜನ ಕೀರ್ತಿ ಹೆಚ್ಚಾಗಿತ್ತು ಎಂಬುದು ನಮ್ಮ ತಿಳುವಳಿಕೆಗೆ ಬರುತ್ತದೆ.

ಈ ವಂಶದ ರಾಜರುಗಳು ಸ್ಥಾಪಿಸಿದ ಶಾಸನಗಳಲ್ಲಿ ಕೆಲವು ಮಾಹಿತಿ ದೊರೆತಿರುವುದರಿಂದ ಇದನ್ನು ಮೊದಲನೆಯ ಆಧಾರವಾಗಿ ಕಾಣಬಹುದಾಗಿದೆ.

## 11. ಕವಿಚಕ್ರವರ್ತಿ ಜನ್ನನ ಅಮೃತಾಪುರ ಶಾಸನ :-



ಕನ್ನಡ ಸಾಹಿತ್ಯದ ಕವಿಚಕ್ರವರ್ತಿಗಳಲ್ಲಿ ಒಬ್ಬನಾದ ಜನ್ನನ ರಚನೆ ಇದಾಗಿರುವುದರಿಂದ ಕನ್ನಡ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಇದೊಂದು ಮಹತ್ವದ ಶಾಸನವಾಗಿದೆ. ಜನ್ನ ಬರೆದ ಬೇರೆ ಶಾಸನಗಳೂ ಇದ್ದಾವೆ. ಅವುಗಳಿಂದ ಅರಸೀಕೆರೆ ಶಾಸನ, ಇವು ಜನ್ನನ ಸಾಹಿತ್ಯದ ಬೆಳವಣಿಗೆಯ ಪ್ರಾರಂಭಿಕ ಕೃತಿಗಳನ್ನು ಗಮನಿಸುವಲ್ಲಿ ಈ ಶಾಸನಗಳು ನೆರವಾಗುತ್ತವೆ. ಈ ಶಾಸನವು ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕಿನ ಅಮೃತಾಪುರ ದೇವಾಲಯದ ಪ್ರಾಂಗಣದ ಕಡೆ ನೆಟ್ಟಿರುವ ಕಲ್ಲಿನ ಮೇಲಿದೆ. ಕಂದ, ವೃತ್ತ, ಗದ್ಯಗಳಿಂದ ಕೂಡಿದ ಈ ಶಾಸನ ಪುಟ್ಟ ಚಂಪೂಕಾವ್ಯದಂತಿದೆ.

ವೀರಬಲ್ಲಾಳನ ದಂಡನಾಯಕ ಅಮೃತೇ-ಶ್ವರನು ತನ್ನಯ ಹೆಸರಿನ ಅಮೃತಸಮುದ್ರ ಎಂಬಲ್ಲಿ ಅಮೃತೇಶ್ವರ ದೇವಾಲಯವನ್ನು ಕಟ್ಟಿಸಿ ದಾನ ನೀಡಿದ ವಿವರವನ್ನು ಈ ಶಾಸನ ತಿಳಿಸುತ್ತದೆ. ಬ್ರಹ್ಮಪುರಿಯ ಬ್ರಾಹ್ಮಣರ ವೃತ್ತಿಗಳನ್ನು ಏರ್ಪಡಿಸಿಕೊಟ್ಟುದನ್ನು ಈ ಶಾಸನ ತಿಳಿಸುತ್ತದೆ. ಅಕ್ಷರಗಾಂಭೀರ್ಯದ ಮಹಾಬಲಪಂಡಿತರ ಶಿಷ್ಯ ನಾರಣ್ಣನು ಶಾಸನವನ್ನು ಕಲ್ಲಿನ ಮೇಲೆ ಬರೆ-ದನು ಬಳಿಕ ಕಂಡರಣೆಕಾರ ರೂವಾರಿ ಮಲ್ಲೋಜ ಕಂಡರಿಸಿದ್ದಾನೆ.

## 12. ಅತ್ತಿಮಬ್ಬೆಯ ಲಕ್ಕುಂಡಿ ಶಾಸನ :-

ಅತ್ತಿಮಬ್ಬೆಯ ಲಕ್ಕುಂಡಿ ಶಾಸನ ಗದಗ ಜಿಲ್ಲೆಯ ಲಕ್ಕುಂಡಿ ಗ್ರಾಮದ ಜೈನಬಸದಿಯ ಹತ್ತಿರ ನೆಟ್ಟಿರುವ ಕಲ್ಲಿನಲ್ಲಿ ಬರೆಯಲ್ಪಟ್ಟಿದೆ. ಅತ್ತಿಮಬ್ಬೆಯ ಧಾರ್ಮಿಕ ಬದುಕಿನ ಬಗ್ಗೆ ಚಿತ್ರಣವು ಲಕ್ಕುಂಡಿ ಶಾಸನದಲ್ಲಿ ದೊರೆಯುತ್ತದೆ. ತನ್ನ ತಂದೆ ಮಲ್ಲಪಯ್ಯ ಸೇನಾನಿಯಾದ ತನ್ನ ತಂಗಿಯು, ನಿಮಿತ್ತವಾಗಿ ಪ್ರಸಿದ್ಧ ದಂಡನಾಯಕರಾದ ಪತಿ, ಆಶ್ರಿತ ದಾನಚಿಂತಾಮಣಿ ಎನಿಸಿದ ಅತ್ತಿಮಬ್ಬೆ, ಜೈನ ಧರ್ಮಾವಲಂಬಿಯಾಗಿ ಎಷ್ಟು ಶ್ರದ್ಧೆ ಹೊಂದಿದ್ದಳು ಎಂದು ತಿಳಿಸುತ್ತದೆ. ಅವಳು ಜೈನ ಧರ್ಮಕ್ಕೆ ಮಾಡಿದ ಸೇವೆ ಸ್ಮರಣೀಯವಾದುದು. ಇದು ಸುಮಾರು ಕ್ರಿ.ಶ. 1175 - 1184 ರ ಕಾಲದ್ದು ಎಂದು ಗುರುತಿಸಲಾಗಿದೆ.

ಲಕ್ಕುಂಡಿ ಕಲ್ಯಾಣ ಚಾಳುಕ್ಯರ ಆಳ್ವಿಕೆಯ ಕಾಲದಲ್ಲಿ ಪ್ರಮುಖ ಕೇಂದ್ರವಾಗಿತ್ತು. ಕನ್ನಡ ಸಾಹಿತ್ಯದ ಕಾಲದಲ್ಲಿ ಲಕ್ಕುಂಡಿ ಪ್ರಮುಖ ಕೇಂದ್ರವಾಗಿತ್ತು. ಇಲ್ಲಿ ಜನರು ಸಾಹಿತ್ಯವನ್ನು ಪೋಷಿಸುತ್ತಿದ್ದರು. ಇಲ್ಲಿನ ಐತಿಹಾಸಿಕ ಶಾಸನಗಳಲ್ಲಿ ಜೈನರ ಸಾಂಸ್ಕೃತಿಕ ಬಗ್ಗೆ ಪ್ರಸ್ತಾಪವಿದೆ.

ಈ ಶಾಸನವನ್ನು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಸಿದ್ಧನಾದ ಇಮ್ಮಡಿ ತೈಲಪ (ಕ್ರಿ.ಶ. ೯೭೩ - ೯೯೭) ನಂತರ ಆಳಿದ ಅವನ ಮಗ ಸತ್ಯಾಶ್ರಯ ಇರಿವಬೆಡಂಗ (ಕ್ರಿ.ಶ. ೯೯೭ - ೧೦೦೮) ರ ಕಾಲದಲ್ಲಿ ಬರೆಯಲಾಗಿದೆ. ಈ ಶಾಸನ ಮುಖ್ಯವಾಗಿ ಸಾಹಿತ್ಯ ಚರಿತ್ರೆಯಲ್ಲಿ ರನ್ನನ 'ಅಜಿತಪುರಾಣ'ದ ಆಶ್ರಯ ದಾನಚಿಂತಾಮಣಿ ಅತ್ತಿಮಬ್ಬೆಯನ್ನು ಕುರಿತದ್ದು.

## ಪ್ರಕಟ ಗ್ರಂಥ :-

೧. ಶಾಸನಗಳು ಮತ್ತು ಕನ್ನಡ ಸಾಹಿತ್ಯ – ಶ್ರೀ ಪ್ರಕಾಶನ
– ಡಾ. ವಿಠಲ್ ಎಸ್. ತಳವಾರ
ಮತ್ತು ನಾಗರಾಜ ಪಾಟೀಲ.
(ಪುಟ ೩೯ - ೪೧)

೨. ಉಳ್ಳಿಗನ್ನಡ ಸಾಹಿತ್ಯ ಚಿಂತನೆ - ಅಕ್ಷ ಪ್ರಕಾಶನ - ಬೆಳಗಾವಿ.
– ಡಾ. ವಾಯ್. ವಾಯ್. ಕೊಣ್ಣೂರ
(ಪುಟ ೩೭ - ೪೭)

೩. ಪಾಲಕಾಣಾದಂಬ ಸಂಗ್ರಹ.

Coordinator IQAC
G. P. PORWAL ARTS, COM
V. V. SALIMATH Sc. Colle
SINDGI-586128.

Principal,
G. P Porwal Arts, Comm &
V. V. Salimath Sc. College
SINDGI-586128. College Code: 5234